# ಸೇತುಬಂಧ ಪೂರ್ವ ಪರೀಕ್ಷೆ 2026-27

## ವಿಷಯ: ಕನ್ನಡ ತರಗತಿ: 7ನೇ ಅಂಕಗಳು: 10 ಸಮಯ: 45 ನಿ

**ವಿದ್ಯಾರ್ಥಿಯ ಹೆಸರು: __________________________ ಹಾಜರಾತಿ ಸಂಖ್ಯೆ: ___________**

---

**ಪ್ರಶ್ನೆ 1. ಕೆಳಗಿನ ಪ್ಯಾರಾವನ್ನು ಗಮನವಿಟ್ಟು ಓದಿ, ಕೊಟ್ಟಿರುವ ಪ್ರಶ್ನೆಗೆ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ:**

*""ಕಾಡುಗಳು ಭೂಮಿಯ ಹಸಿರು ಹೊದಿಕೆಯಿದ್ದಂತೆ. ಅವು ನಮಗೆ ಕೇವಲ ಆಮ್ಲಜನಕವನ್ನು ಮಾತ್ರ ನೀಡುವುದಿಲ್ಲ, ಬದಲಿಗೆ ಮಳೆಯನ್ನು ತರಿಸಲು ಮತ್ತು ಭೂಮಿಯ ಫಲವತ್ತತೆಯನ್ನು ಕಾಪಾಡಲು ಸಹಾಯ ಮಾಡುತ್ತವೆ. ವನ್ಯಜೀವಿಗಳಿಗೆ ಆಶ್ರಯ ತಾಣವಾಗಿರುವ ಕಾಡುಗಳನ್ನು ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ".*

**ಪ್ರಶ್ನೆ: ಕಾಡುಗಳು ನಮಗೆ ಹೇಗೆ ಸಹಾಯ ಮಾಡುತ್ತದೆ?**

ಉತ್ತರ:______________________________________________________

______________________________________________________

______________________________________________________

______________________________________________________

**ಪ್ರಶ್ನೆ 2. ಕೆಳಗಿನ ವಾಕ್ಯಗಳನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ನಿಖರವಾದ ಉತ್ತರ ಬರೆಯಿರಿ.**

*" "ಪ್ರಾಚೀನ ಕಾಲದಲ್ಲಿ ಮಗಧ ಸಾಮ್ರಾಜ್ಯವನ್ನು ಆಳಿದ ಬಿಂಬಿಸಾರನು ಒಬ್ಬ ಶ್ರೇಷ್ಠ ರಾಜನಾಗಿದ್ದನು. ಅವನು ತನ್ನ ಸಾಮ್ರಾಜ್ಯದ ರಕ್ಷಣೆಗಾಗಿ 'ರಾಜಗೃಹ' ಎಂಬ ಹೊಸ ರಾಜಧಾನಿ ನಗರವನ್ನು ನಿರ್ಮಿಸಿದನು. ಬಿಂಬಿಸಾರನು ನೆರೆಹೊರೆಯ ರಾಜ್ಯಗಳೊಂದಿಗೆ ಉತ್ತಮ ಮೈತ್ರಿ ಸಂಬಂಧವನ್ನು ಹೊಂದಿದ್ದನು ಮತ್ತು ತನ್ನ ಪ್ರಜೆಗಳ ಸುಖ-ಶಾಂತಿಗಾಗಿ ಅನೇಕ ಜನಪದ ಕಾರ್ಯಗಳನ್ನು ಮಾಡಿದನು."."*

ಅ) ಬಿಂಬಿಸಾರನು ತನ್ನ *ಸಾಮ್ರಾಜ್ಯದ ರಕ್ಷಣೆಗಾಗಿ ಎನನ್ನು ನಿರ್ಮಿಸಿದನು.?*

ಉತ್ತರ:______________________________________________________

ಬ) ಬಿಂಬಿಸಾರನು ಯಾವ ಸಾಮ್ರಾಜ್ಯವನ್ನು ಆಳಿದನು?

ಉತ್ತರ:______________________________________________________

**ಪ್ರಶ್ನೆ 3. 'ನಿಮ್ಮ ಕುಟುಂಬದಲ್ಲಿ ನಿಮಗೆ ಇಷ್ಟವಾದ ವ್ಯಕ್ತಿ' ಅಥವಾ 'ನನ್ನ ಶಾಲೆಯ ಗ್ರಂಥಾಲಯ' ಎಂಬ ವಿಷಯದ ಕುರಿತು 3 ರಿಂದ 4 ಸರಳ ವಾಕ್ಯಗಳನ್ನು ಸ್ವಂತವಾಗಿ ಬರೆಯಿರಿ.**

______________________________________________________________
______________________________________________________________
______________________________________________________________
______________________________________________________________
______________________________________________________________
______________________________________________________________

**ಪ್ರಶ್ನೆ 4. ಕೆಳಗಿನ ಸನ್ನಿವೇಶವನ್ನು ಓದಿ, ಕೊಟ್ಟಿರುವ ಪ್ರಶ್ನೆಗೆ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ:**

"ರಜೆಯ ದಿನದಂದು ನಿಮ್ಮ ತಂದೆಯವರ ಸ್ನೇಹಿತರೊಬ್ಬರು (ಅಂಕಲ್) ನಿಮ್ಮ ಮನೆಗೆ ಬರುತ್ತಾರೆ. ಆಗ ನಿಮ್ಮ ತಂದೆ-ತಾಯಿ ಇಬ್ಬರೂ ಮನೆಯಲ್ಲಿ ಇರುವುದಿಲ್ಲ. ನೀವು ಒಬ್ಬರೇ ಮನೆಯಲ್ಲಿದ್ದೀರಿ."

**ಪ್ರಶ್ನೆ: ನಿಮ್ಮ ಮನೆಗೆ ಬಂದ ಅತಿಥಿಯನ್ನು ನೀವು ದಿನನಿತ್ಯದ ಉತ್ತಮ ಭಾಷಾ ಶೈಲಿಯಲ್ಲಿ ಹೇಗೆ ಉಪಚರಿಸುತ್ತೀರಿ?**

ಅ) "ನಮ್ಮ ಅಪ್ಪ-ಅಮ್ಮ ಮನೆಯಲ್ಲಿ ಇಲ್ಲ, ನೀವು ಆಮೇಲೆ ಬನ್ನಿ" ಎಂದು ಬಾಗಿಲು ಮುಚ್ಚುವುದು.

ಆ) "ಬನ್ನಿ ಅಂಕಲ್, ಒಳಗೆ ಬಂದು ಕುಳಿತುಕೊಳ್ಳಿ. ಅಪ್ಪ ಈಗಷ್ಟೇ ಹೊರಗೆ ಹೋಗಿದ್ದಾರೆ, ಲೇಟಾಗುತ್ತೆ" ಎನ್ನುವುದು.

ಇ) "ನಮಸ್ಕಾರ ಅಂಕಲ್, ಒಳಗೆ ಬಂದು ಕುಳಿತುಕೊಳ್ಳಿ. ಅಪ್ಪ ಈಗಷ್ಟೇ ಹೊರಗೆ ಹೋಗಿದ್ದಾರೆ, ಸ್ವಲ್ಪ ಹೊತ್ತಿನಲ್ಲಿ ಬರುತ್ತಾರೆ. ನೀರು ಕುಡಿಯುತ್ತೀರಾ?" ಎಂದು ಕೇಳುವುದು.

ಈ) ಅವರು ಕೇಳುವ ಪ್ರಶ್ನೆಗಳಿಗೆ ಏನೂ ಉತ್ತರಿಸದೆ ಸುಮ್ಮನೆ ನಿಲ್ಲುವುದು.

ಉತ್ತರ:________________________________________

**ಪ್ರಶ್ನೆ 5: ಸನ್ನಿವೇಶ:** ನೀನು ಮತ್ತು ನಿನ್ನ ಸ್ನೇಹಿತ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ, ಒಬ್ಬ ವೃದ್ಧರು ಕೈಯಲ್ಲಿ ಭಾರವಾದ ಸಾಮಾನುಗಳ ಚೀಲವನ್ನು ಹಿಡಿದುಕೊಂಡು ರಸ್ತೆ ದಾಟಲು ಕಷ್ಟಪಡುತ್ತಿರುವುದನ್ನು ಕಾಣುತ್ತೀರಿ.

**ಈ ಸನ್ನಿವೇಶವನ್ನು ನೀನು ಹೇಗೆ ಅರ್ಥಮಾಡಿಕೊಳ್ಳುತ್ತೀಯ? ಮತ್ತು ಆ ವೃದ್ಧರಿಗೆ ಸಹಾಯ ಮಾಡಲು ನೀನು ಹಾಗೂ ನಿನ್ನ ಸ್ನೇಹಿತ ಏನು ಮಾಡುತ್ತೀರಿ ಎಂಬುದನ್ನು 3-4 ವಾಕ್ಯಗಳಲ್ಲಿ ಸ್ಪಷ್ಟವಾಗಿ ವಿವರಿಸಿ.**

______________________________________________________________________
______________________________________________________________________
______________________________________________________________________
______________________________________________________________________
______________________________________________________________________
______________________________________________________________________

**ಪ್ರಶ್ನೆ 6. ಕೆಳಗೆ ನೀಡಿರುವ ಪದ/ನುಡಿಗಟ್ಟುಗಳನ್ನು ಬಳಸಿಕೊಂಡು ನಿಮ್ಮ ಸ್ವಂತ ಮಾತುಗಳಲ್ಲಿ ತಲಾ ಒಂದು ಸರಳ ವಾಕ್ಯವನ್ನು ರಚಿಸಿ ಬರೆಯಿರಿ:**

**ಅ)ಸಂತೋಷ:**___________________________________________________________

**ಆ) ಕಣ್ಣಿಡು**___________________________________________________________

**ಪ್ರಶ್ನೆ 7. ನೀವು ಇತ್ತೀಚೆಗೆ ನಿಮ್ಮ ಶಾಲೆಯಿಂದ ಅಥವಾ ಪೋಷಕರೊಂದಿಗೆ ಯಾವುದಾದರೂ ಒಂದು ಸುಂದರವಾದ ನದಿ, ಸಮುದ್ರದ ದಂಡೆ (ಬೀಚ್) ಅಥವಾ ಜಲಪಾತಕ್ಕೆ ಪ್ರವಾಸ ಹೋಗಿದ್ದೀರಿ ಎಂದು ಕಲ್ಪಿಸಿಕೊಳ್ಳಿ. ಅಲ್ಲಿನ ನೀರು, ಅಲೆಗಳು ಮತ್ತು ಪ್ರಕೃತಿಯನ್ನು ಕಂಡಾಗ ನಿಮಗಾದ ಅನುಭವವನ್ನು 3 ಸರಳ ವಾಕ್ಯಗಳಲ್ಲಿ ಬರೆಯಿರಿ.**

______________________________________________________________________
______________________________________________________________________
______________________________________________________________________
______________________________________________________________________
______________________________________________________________________

**ಪ್ರಶ್ನೆ 8. ಕೆಳಗೆ ಕೆಲವು ಪದಗಳ ಜೋಡಿಯನ್ನು ನೀಡಲಾಗಿದೆ. ಅವುಗಳನ್ನು ಓದಿ, ಧ್ವನಿ ವ್ಯತ್ಯಾಸವನ್ನು (ಒತ್ತಕ್ಷರ/ಮಹಾಪ್ರಾಣ) ಸೂಕ್ಷ್ಮವಾಗಿ ಆಲಿಸಿ, ಸರಿಯಾದ ಉಚ್ಚಾರಣೆ ಇರುವ ಶುದ್ಧವಾದ ಪದವನ್ನು ಆಯ್ದು ಬರೆಯಿರಿ:**

1. ಕತೆ / ಕಥೆ ________
2. ಖಗ / ಕಗ __________
3. ಘಂಟೆ / ಗಂಟೆ ________

ಪ್ರಶ್ನೆ 9. ನಿಮ್ಮ ಶಾಲೆಯಲ್ಲಿ ನಡೆದ 'ಮಕ್ಕಳ ಸಂತೆ' (ಅಥವಾ ಯಾವುದಾದರೂ ಶಾಲಾ ಹಬ್ಬ) ಕಾರ್ಯಕ್ರಮ ಎಷ್ಟು ಚೆನ್ನಾಗಿತ್ತು ಎಂಬುದನ್ನು ತಿಳಿಸಿ, ನಿಮ್ಮ ಸ್ನೇಹಿತನಿಗೆ/ಗೆಳತಿಗೆ ಒಂದು ಸಣ್ಣ ಪತ್ರವನ್ನು ಸರಳವಾದ ಭಾಷೆಯಲ್ಲಿ ಬರೆಯಿರಿ.

ಪ್ರಶ್ನೆ 10. ನೀವು ಪ್ರತಿದಿನ ತರಗತಿಯಲ್ಲಿ ನೋಡುವ ಕಪ್ಪುಹಲಗೆಗೆ (Blackboard) ಜೀವ ಬಂದು ಅದು ನಿಮ್ಮೊಂದಿಗೆ ಮಾತನಾಡಲು ಮುಖಾಮುಖಿಯಾದರೆ, ನೀವಿಬ್ಬರು ಏನೆಲ್ಲಾ ಮಾತನಾಡಬಹುದು? ನಿಮ್ಮ ಕಲ್ಪನೆಯ ಆಧಾರದ ಮೇಲೆ 3-4 ಸಾಲುಗಳ ಒಂದು ಸಣ್ಣ ಸಂಭಾಷಣೆಯನ್ನು ಬರೆಯಿರಿ.

# ಸೇತುಬಂಧ ಪೂರ್ವ ಪರೀಕ್ಷೆ 2026-27 ಉತ್ತರ ಪತ್ರಿಕೆ

**ವಿಷಯ: ಕನ್ನಡ** **ತರಗತಿ: 6ನೇ**

---

ಪ್ರಶ್ನೆ 1 ಕಾಡುಗಳ ಪ್ರಾಮುಖ್ಯತೆ ಮತ್ತು ಅವುಗಳ ರಕ್ಷಣೆಯ ಅಗತ್ಯವನ್ನು ತಿಳಿಸುವುದು

ಪ್ರಶ್ನೆ 2 ಅ) ರಾಮು ತನ್ನ **ತಾಯಿಯ** ಜೊತೆ ಜಾತ್ರೆಗೆ ಹೋಗಿದ್ದನು.

ಬ) ರಾಮು ತನ್ನ ತಂಗಿಗಾಗಿ ಒಂದು ಸುಂದರವಾದ ಬಣ್ಣದ **ಬಲೂನ್ ಮತ್ತು ಆಟಿಕೆಯನ್ನು** ಕೊಂಡುಕೊಂಡನು.

ಪ್ರಶ್ನೆ 3. ನನ್ನ ಶಾಲೆ' ಮಾದರಿ ಉತ್ತರ:** ನಮ್ಮ ಶಾಲೆಯ ಹೆಸರು ಜಿ.ಹೆಚ್.ಪಿ.ಎಸ್ ಚೆಂಡಿಯಾ ನಂ. 1. ನನ್ನ ಶಾಲೆಯಲ್ಲಿ ದೊಡ್ಡದಾದ ಆಟದ ಮೈದಾನವಿದೆ. ನಮ್ಮ ಶಿಕ್ಷಕರು ನಮಗೆ ತುಂಬಾ ಚೆನ್ನಾಗಿ ಪಾಠ ಮಾಡುತ್ತಾರೆ. ನನಗೆ ನನ್ನ ಶಾಲೆ ಎಂದರೆ ತುಂಬಾ ಇಷ್ಟ.

ನನ್ನ ನೆಚ್ಚಿನ ಪ್ರಾಣಿ' ಮಾದರಿ ಉತ್ತರ:** ನನಗೆ ಹಸು ಎಂದರೆ ತುಂಬಾ ಇಷ್ಟ. ಹಸು ನಮಗೆ ಸಿಹಿಯಾದ ಹಾಲನ್ನು ನೀಡುತ್ತದೆ. ಹಸು ಹಸಿರು ಹುಲ್ಲನ್ನು ಮೇಯುತ್ತದೆ. ನಾವು ಹಸುವನ್ನು ಗೋಮಾತೆ ಎಂದು ಪೂಜಿಸುತ್ತೇವೆ.

ಪ್ರಶ್ನೆ 4. (ಅಂಗಡಿಯಲ್ಲಿ)ವಿದ್ಯಾರ್ಥಿ:** ಅಣ್ಣಾ, ನಿಮ್ಮ ಅಂಗಡಿಯಲ್ಲಿ ಪೆನ್ಸಿಲ್ ಮತ್ತು ರಬ್ಬರ್ ಇದೆಯಾ?

**ಅಂಗಡಿಯವನು:** ಹೌದು ತಮ್ಮಾ, ಇದೆ. ನಿನಗೆ ಯಾವ ಬಣ್ಣದ ಪೆನ್ಸಿಲ್ ಬೇಕು?

**ವಿದ್ಯಾರ್ಥಿ:** ನನಗೆ ಅಪಸರಾ ಪೆನ್ಸಿಲ್ ಕೊಡಿ. ಎರಡಕ್ಕೂ ಸೇರಿ ಎಷ್ಟು ಹಣವಾಯಿತು?

ಪ್ರಶ್ನೆ 5. ವಯಸ್ಸಾದ ಕಾರಣ ಮತ್ತು ಕೈಯಲ್ಲಿ ಭಾರವಾದ ಚೀಲವಿದ್ದಿದ್ದರಿಂದ ಅವರಿಗೆ ವಾಹನಗಳು ಓಡಾಡುವ ರಸ್ತೆಯನ್ನು ಒಬ್ಬರೇ ದಾಟಲು ಸಾಧ್ಯವಾಗುತ್ತಿಲ್ಲ ಎಂಬುದನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ. ತಕ್ಷಣ ನಾನು ಮತ್ತು ನನ್ನ ಸ್ನೇಹಿತ ಅವರ ಬಳಿಗೆ ಹೋಗಿ, ಮೊದಲು ಅವರ ಕೈಯಲ್ಲಿದ್ದ ಭಾರವಾದ ಚೀಲವನ್ನು ನಾವು ಪಡೆದುಕೊಳ್ಳುತ್ತೇವೆ. ನಂತರ ಅವರ ಕೈಯನ್ನು ಸುರಕ್ಷಿತವಾಗಿ ಹಿಡಿದುಕೊಂಡು, ರಸ್ತೆಯ ಇಕ್ಕೆಲಗಳಲ್ಲಿ ಬರುವ ವಾಹನಗಳನ್ನು ಗಮನಿಸಿ, ಅವರು ರಸ್ತೆ ದಾಟಲು ಸಹಾಯ ಮಾಡುತ್ತೇವೆ. ಹಿರಿಯರಿಗೆ ಸಹಾಯ ಮಾಡುವುದು ನಮ್ಮ ಕರ್ತವ್ಯವಾಗಿದ್ದರಿಂದ ಈ ಕೆಲಸ ನಮಗೆ ಸಂತೋಷ ನೀಡುತ್ತದೆ.

ಪ್ರಶ್ನೆ 6. 1. ಹಬ್ಬದ ದಿನ ಹೊಸ ಬಟ್ಟೆ ಹಾಕಿಕೊಂಡಾಗ ನನಗೆ ತುಂಬಾ **ಸಂತೋಷ**ವಾಗುತ್ತದೆ..

2. ಬೆಕ್ಕು ಹಾಲು ಕುಡಿಯದಂತೆ ತಾಯಿ ಅದರ ಮೇಲೆ **ಕಣ್ಣಿಟ್ಟಿದ್ದರು**.

ಪ್ರಶ್ನೆ 7. ಸಮುದ್ರದ ದಂಡೆಯಲ್ಲಿ ನಿಂತಾಗ ತಂಪಾದ ಗಾಳಿ ಬೀಸಿ ನನ್ನ ಮನಸ್ಸಿಗೆ ತುಂಬಾ ಮುದ ನೀಡಿತು. ನೀರಿನ ಅಲೆಗಳು ಬಂದು ನನ್ನ ಪಾದಗಳನ್ನು ಮುಟ್ಟಿ ಹೋದಾಗ ನನಗೆ ತುಂಬಾ ಖುಷಿ ಮತ್ತು

ಆಶ್ಚರ್ಯವಾಯಿತು.ನೀರಿನಲ್ಲಿ ಸ್ನೇಹಿತರ ಜೊತೆ ಆಟ ಆಡಿದ್ದು ಮತ್ತು ಮರಳಿನಲ್ಲಿ ಮನೆ ಕಟ್ಟಿದ್ದು ನನ್ನ ಜೀವನದ ಮರೆಯಲಾಗದ ಅನುಭವವಾಗಿದೆ.

ಪ್ರಶ್ನೆ 8. ಕಥೆ, ಖಗ , ಘಂಟೆ

ಪ್ರಶ್ನೆ 9.

ಕಾರವಾರ

24-05-2026

**ಪ್ರೀತಿಯ ಗೆಳೆಯ ಅಬಕಗೆ,** >

ನಿನ್ನ ಗೆಳೆಯ ಅಬಕ ಮಾಡುವ ಕುಶಲೋಪರಿ ನಮನಗಳು. ನಾನು ಇಲ್ಲಿ ಆರಾಮವಾಗಿದ್ದೇನೆ. ನೀನು ಕೂಡ ಅಲ್ಲಿ ಆರಾಮವಾಗಿರುತ್ತೀಯ ಎಂದು ಭಾವಿಸುತ್ತೇನೆ.

ನಮ್ಮ ಶಾಲೆಯಲ್ಲಿ ಇತ್ತೀಚೆಗೆ 'ಮಕ್ಕಳ ಸಂತೆ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ನಾನು ಅಲ್ಲಿ ಮನೆಯಿಂದ ತಂದಿದ್ದ ತರಕಾರಿ ಮತ್ತು ತಿಂಡಿಗಳ ಅಂಗಡಿ ಇಟ್ಟಿದ್ದೆ. ನಾವೆಲ್ಲರೂ ತುಂಬಾ ವ್ಯಾಪಾರ ಮಾಡಿ, ಮಜಾ ಮಾಡಿದೆವು. ಮುಂದಿನ ಬಾರಿ ನೀನು ಖಂಡಿತ ನಮ್ಮ ಶಾಲೆಗೆ ಬರಬೇಕು.

**ಇಂತಿ ನಿನ್ನ ಪ್ರೀತಿಯ ಗೆಳೆಯ,** > ಅಬಕ

**ಇವರಿಗೆ (ವಿಳಾಸ):** > ಅಬಕ,

ಹೊಸಮನೆ ಹಟ್ಟಿ, ಶಿರಸಿ.

ಪ್ರಶ್ನೆ 10. ಮಕ್ಕಳ ಅಭಿವ್ಯಕ್ತಿ